**ಸಾಕ್ಷಿಯನ್ನು ದಿನಾಂಕ 09-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿಯರ ಪರ ಶ್ರೀ ಹೆಚ್.ಬಿ.ಎಸ್ ವಕೀಲರಿಂದಃ**

12. ನನ್ನ ತಂದೆ-ತಾಯಿಗೆ 4 ಜನ ಮಕ್ಕಳು. ನನ್ನ ತಮ್ಮನನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ಮದುವೆಯಾಗಿದೆ. ನನ್ನ ತಮ್ಮನ ಹೆಸರು ನವೀನ್ ಕುಮಾರ್. ಆತ ನಮ್ಮ ಜೊತೆ ನಾಗತಿಬೆಳಗಲು ಗ್ರಾಮದಲ್ಲಿ ವಾಸವಿದ್ದೇನೆ ಎಂದರೆ ಸರಿ. ನನ್ನ ತಮ್ಮನಿಗೆ 4 ನೇ ಪ್ರತಿವಾದಿಯನ್ನು ಮದುವೆ ಮಾಡಿಸಬೇಕೆಂದು ನಮಗೆ ಆಸೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ 4 ನೇ ಪ್ರತಿವಾದಿಯ ಮೃತ ತಂದೆ ಅಂದರೆ ನನ್ನ ಮಾವನಿಗೆ ಆ ರೀತಿ ಆಸೆ ಇತ್ತು ಎನ್ನುತ್ತಾರೆ. ನನ್ನ ತಮ್ಮನಿಗೆ 4 ನೇ ಪ್ರತಿವಾದಿಯನ್ನು ಮದುವೆ ಮಾಡಿಸಲಿಲ್ಲ ಎಂಬ ದ್ವೇಷದಿಂದ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

13. ನಾನು ಸುಬ್ಬಯ್ಯ ಮೆಡಿಕಲ್ ಕಾಲೇಜಿನಲ್ಲಿ ಕಳೆದ 4 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಓದಲು-ಬರೆಯಲು ಬರುತ್ತದೆ ಎಂದರೆ ಸರಿ. ಮೃತ 1 ನೇ ಪ್ರತಿವಾದಿ ಸಾವಿತ್ರಮ್ಮ ನನಗೆ ದೊಡ್ಡಮ್ಮ ಆಗಬೇಕು. ಆಕೆಯ ಗಂಡ ಬಸವರಾಜಪ್ಪ ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮೃತಪಟ್ಟ ನಂತರ ಬಸವರಾಜಪ್ಪ ಬದುಕಿರುವ ಬಗ್ಗೆ ನಮಗೆ ಗೊತ್ತಿತ್ತು ಎಂದರೆ

ಸರಿ. ಅವರನ್ನು ಈ ದಾವೆಗೆ ಸೇರಿಸಬೇಕಿತ್ತು ಎಂದು ನನಗೆ ಗೊತ್ತು ಎಂದರೆ ಸಾಕ್ಷಿ ಅವರ ಮಕ್ಕಳನ್ನು ಈಗಾಗಲೇ ಪಕ್ಷಗಾರರಾನಾಗಿ ಸೇರಿಸಿದ್ದೇವೆ ಎನ್ನುತ್ತಾರೆ. ಮೃತ 1 ನೇ ಪ್ರತಿವಾದಿಗೆ ಆಕೆಯ ಮಕ್ಕಳನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇಲ್ಲ ಎಂದು ಸುಳ್ಳು ಹೇಳಿ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದೆವು ಎಂದರೆ ಸರಿಯಲ್ಲ.

14. ಈಗ ನನಗೆ ತೋರಿಸಲಾದ ಫೋಟೋಗಳಲ್ಲಿ ಕಾಣುವ ಮನೆ ತೋಟದ ಒಳಗೆ ಇದ್ದು ಅಲ್ಲಿ ನಾನು ಮತ್ತು ನನ್ನ ತಂದೆ-ತಾಯಿ ಜಾನುವಾರುಗಳನ್ನು ಕಟ್ಟಿಕೊಂಡು ವಾಸವಿದ್ದೇವೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಫೋಟೋವನ್ನು **<u>ನಿಡಿ-3</u>** ಎಂದು ಗುರುತಿಸಲಾಯಿತು. ನನ್ನ ಅಜ್ಜನ ಕಾಲದಿಂದಲೂ ನಿಡಿ-3 ರ ಫೋಟೋದಲ್ಲಿ ಕಾಣುವ ಮನೆಯಲ್ಲಿ ನನ್ನ ತಂದೆ-ತಾಯಿ ವಾಸವಿದ್ದಾರೆ ಎಂದರೆ ಸರಿ. ನಿಡಿ-1 ಮತ್ತು 3 ರ ಫೋಟೋಗಳಲ್ಲಿ ಕಾಣುವ ಮನೆಗಳಲ್ಲಿ ನಾವು ಈ ಹಿಂದಿನಿಂದಲೂ ವಾಸವಿದ್ದು ಆ ಸಂಬಂಧ ಪ್ರತಿವಾದಿಯಾರ್ಯಾರು ಇಲ್ಲಿಯವರೆಗೆ ತಕರಾರು ಮಾಡಿಲ್ಲ ಎಂದರೆ ಸರಿ. ತಮಗಿದ್ದ ಸ್ವತಂತ್ರ ಹಕ್ಕಿನಿಂದ ನನ್ನ ಅಜ್ಜ ನಿಡಿ-1 ಮತ್ತು 3 ರ ಫೋಟೋಗಳಲ್ಲಿ ಕಾಣುವ ಮನೆಗಳನ್ನು ನನ್ನ ತಂದೆಗೆ ಕೊಟ್ಟಿದ್ದರು ಎಂದರೆ ಸರಿ.

15. ನನ್ನ ಅಜ್ಜ ಜೀವಂತ ಇದ್ದಾಗ ಆಸ್ತಿಗಳ ಸಂಬಂಧ ಏನೇನು ವ್ಯವಹಾರ ಮಾಡಿದ್ದಾರ ಎಂಬ ವಿಷಯ ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿ. ನನ್ನ ಅಜ್ಜ ಬದುಕಿದ್ದವರೆಗೂ ಆಸ್ತಿಗಳ ಸಂಬಂಧ ಯಾವುದೇ ವ್ಯಾಜ್ಯ ಇರಲಿಲ್ಲ ಎಂದರೆ ಸರಿ. 1991 ರಲ್ಲಿ ಆದ ಪಾಲು ವಿಭಾಗದಲ್ಲಿ

ತಮ್ಮ ಪಾಲಿಗೆ ಬಂದ 2 ಎಕರೆ ಜಮೀನನ್ನು ನನ್ನ ಅಜ್ಜ ಬದುಕಿರುವರೆಗೂ ಅನುಭವಿಸುತ್ತಿದ್ದರೂ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಾಲು ವಿಭಾಗದ ಪ್ರಕಾರ ಸದರಿ 2 ಎಕರೆ ಜಮೀನಿನ ಪಹಣಿ ನನ್ನ ಅಜ್ಜ ಬದುಕಿದ್ದವರೆಗೂ ಅವರ ಹೆಸರಿನಲ್ಲೇ ಇತ್ತು ಎನ್ನುವುದು ನನಗೆ ಗೊತ್ತಿಲ್ಲ.

16. ನಾನು 1979-80 ರಿಂದ 1988-89 ರವರೆಗಿನ ಅವಧಿಯ ನಿ.ಪಿ.-1 ರಿಂದ 4 ರ ಪಹಣಿಗಳನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿ ಸದರಿ ಪಹಣಿಗಳನ್ನು ನನ್ನ ತಮ್ಮ ಕೊಟ್ಟರು ಎನ್ನುತ್ತಾರೆ. 1988-89 ರ ನಂತರದ ಪಹಣಿಗಳನ್ನು ಉದ್ದೇಶ ಪೂರಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ಪಾಲು ವಿಭಾಗದಲ್ಲಿ ಬಂದಿದ್ದ 2 ಎಕರೆ ಆಸ್ತಿಗೆ ಸಂಬಂಧಪಟ್ಟಂತೆ 1991 ರಿಂದ 2003 ರವೆರೆಗಿನ ಪಹಣಿಗಳು ಅವರ ಹೆಸರಿನಲ್ಲೇ ಇತ್ತು ಎಂದರೆ ಸರಿ. 1991 ರಲ್ಲಿ ಆದ ಕಾನೂನು ಬದ್ಧ ಪಾಲು ವಿಭಾಗಕ್ಕೆ ಅನುಗುಣವಾಗಿ ನನ್ನ ಅಜ್ಜ ಸದರಿ 2 ಎಕರೆ ಜಮೀನನ್ನು ಸ್ವತಂತ್ರವಾಗಿ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ತಾನು ಮೃತಪಟ್ಟ ನಂತರ ತನ್ನ 2 ಎಕರೆ ಆಸ್ತಿ ತನ್ನ ಮಕ್ಕಳಾದ 2 ನೇ ಪ್ರತಿವಾದಿ ಮತ್ತು ಮೃತ ನಾಗರಾಜ್ ರವರಿಗೆ ಸೇರಬೇಕೆಂದು ನನ್ನ ಅಜ್ಜನ ಬಯಕೆಯಾಗಿತ್ತು ಎಂದರೆ ಸರಿಯಲ್ಲ.

17. 1991 ರಲ್ಲಿ ಆದ ಜುಬಾನಿ ಪಾಲು ವಿಭಾಗದ ಪ್ರಕಾರವೇ ತಲಾ 2 ಎಕರೆ 13 ಗುಂಟೆ ಆಸ್ತಿಯನ್ನು 2 ನೇ ಪ್ರತಿವಾದಿ ಮತ್ತು ಮೃತ ನಾಗರಾಜ್ ಅನುಭವಿಸುತ್ತಿದ್ದಾರೆ

ಎಂದರೆ ಸರಿ. ಸದರಿಯರಿಬ್ಬರು ದಿನಾಂಕ 05.11.2003 ರಲ್ಲಿ ನೊಂದಾಯಿತ ಪಾಲು ವಿಭಾಗ ಮಾಡಿಕೊಂಡಿರುವ ವಿಷಯ ಗೊತ್ತಿದ್ದರೂ ಸಹ ಅದನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

18. 2 ರಿಂದ 5 ನೇ ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಏನು ಹೇಳಿದ್ದಾರೆ ಎನ್ನುವುದು ನನಗೆ ಗೊತ್ತು. ದಾವಾ ಸ್ವತ್ತುಗಳ ಸಂಬಂಧ 1991 ರಲ್ಲೇ ನನ್ನ ಅಜ್ಜ ಮತ್ತು ಅವರ ಗಂಡು ಮಕ್ಕಳ ನಡುವೆ ಜುಬಾನಿ ಪಾಲು ವಿಭಾಗ ನಡೆದು ಆ ನಂತರ ದಿನಾಂಕ 05.11.2003 ರಂದು 2 ನೇ ಪ್ರತಿವಾದಿ ಮತ್ತು ಮೃತ ನಾಗರಾಜ್ ರವರ ನಡುವೆ ನೊಂದಾಯಿತ ಪಾಲು ವಿಭಾಗ ಆಗಿರುವುದರಿಂದ ದಾವಾ ಸ್ವತ್ತಿನಲ್ಲಿ ನನ್ನ ತಾಯಿಗೆ ಯಾವುದೇ ಹಕ್ಕು ಅಥವಾ ಪಾಲು ಇಲ್ಲ ಎಂದರೆ ಸರಿಯಲ್ಲ. 1991 ಕ್ಕೂ ಮೊದಲೇ ನಿಡಿ–1 ರ ಫೋಟೋದಲ್ಲಿ ಕಾಣುವ ಮನೆ ಕಟ್ಟಲಾಗಿರುವ ನಿವೇಶನ ಮತ್ತು ನಿಡಿ–3 ರ ಫೋಟೋದಲ್ಲಿ ಕಾಣುವ ತೋಟದ ಮನೆಯನ್ನು ನನ್ನ ಅಜ್ಜ ನನ್ನ ತಾಯಿಯ ಹಿಸ್ಸೆಯಾಗಿ ಕೊಟ್ಟಿರುವ ವಿಷಯ ನಮಗೆ ಗೊತ್ತಿತ್ತು ಎಂದರೆ ಸರಿ. ಸಾಕ್ಷಿ ಪುನಃ ನನ್ನ ತಾಯಿ ಹಿಸ್ಸೆಗೆ ನನ್ನ ಅಜ್ಜ ನಿವೇಶನ ಮಾತ್ರ ಕೊಟ್ಟಿದ್ದರು ಎನ್ನುತ್ತಾರೆ. ನನ್ನ ತಾಯಿ ಹಿಸ್ಸೆಗೆ ನನ್ನ ಅಜ್ಜ ಆಸ್ತಿಗಳನ್ನು ಕೊಟ್ಟಿದ್ದರು ಸಹ ಅದನ್ನು ಮರೆಮಾಚಿ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

19. ನನ್ನ ಅಜ್ಜ ನಿವೇಶನವನ್ನು ನನ್ನ ತಾಯಿಯ ಹಿಸ್ಸೆಗೆ ಕೊಟ್ಟಿದ್ದರು ಎಂಬ ವಿಷಯವನ್ನು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ

ಷೆಡ್ಯೂಲ್ ಬಿ ಸ್ವತ್ತು ಎಂದು ವಾದ ಪತ್ರದಲ್ಲಿ ತೋರಿಸಲಾಗಿರುವ ನಿವೇಶನ ಮತ್ತು ಮನೆ ಈಗಾಗಲೇ ಪಾಲು ವಿಭಾಗ ಆಗಿದೆ ಎಂದರೆ ಸಾಕ್ಷಿ ಪಾಲು ಆಗಿಲ್ಲ ಆದರೆ ಸದರಿ ಮನೆಗೆ ಮಧ್ಯದಲ್ಲಿ ಗೋಡೆ ಹಾಕಿಕೊಂಡು 2 ಭಾಗ ಮಾಡಿ ನನ್ನ ಮಾವಂದಿರು ಪ್ರತ್ಯೇಕವಾಗಿ ವಾಸವಿದ್ದಾರೆ ಮತ್ತು ಸದರಿ ಮನೆಯ ಹಿಂಬದಿಯಲ್ಲಿರುವ ಇನ್ನೊಂದು ಮನೆಯಲ್ಲಿ ನಾವು ವಾಸವಿದ್ದೇವೆ ಎನ್ನುತ್ತಾರೆ. ಸದರಿ 3 ಮನೆಗಳ ಪಂಚಾಯತಿ ದಾಖಲೆಗಳು ನನ್ನ ಮಾವಂದಿರು ಮತ್ತು ನನ್ನ ತಾಯಿಯ ಹೆಸರಿಗೆ ಪ್ರತ್ಯೇಕವಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ನನ್ನ ತಾಯಿಯ ಹೆಸರಿಗೆ ಪ್ರತ್ಯೇಕ ಖಾತೆ ಇದೆ ಎನ್ನುತ್ತಾರೆ. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**